
ಪುಸ್ತಕ ಪರಿಚಯ

# ಕಾರುಣ್ಯನಿಧಿ ಶ್ರೀಮಾತೆ ಶಾರದಾದೇವಿ



**ಲೇಖಕರು :** ಶ್ರೀಮತಿ ಎ.ಪಿ.ಮಾಲತಿ
**ಪ್ರಕಾಶಕರು:** ಸಾಹಿತ್ಯ ನಂದನ, ನಂ.೪, ೪ನೇ 'ಇ' ವಿಭಾಗ, ೧೦ 'ಎ' ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು – ೫೬೦ ೦೧೦
**ಪುಟಗಳು :** ೧೬೮ ಬೆಲೆ: ₹ ೮೦

ಕಾರುಣ್ಯನಿಧಿ ಶ್ರೀಮಾತೆ ಶಾರದಾದೇವಿಯವರ ಜೀವನಗಾಥೆ ಬರೆಯುವುದು ಬಹು ಸಾಹಸದ ಕೆಲಸವೇ ಸರಿ. ಲೇಖಕಿ ಎ.ಪಿ.ಮಾಲತಿಯವರು ಶ್ರೀಮಾತೆಯವರ ಮೇಲಣ ಅಪಾರ ಭಕ್ತಿ, ಶ್ರದ್ಧೆಯಿಂದ ಈ ಕೆಲಸ ಮಾಡಿದ್ದಾರೆ. ಈಗಾಗಲೇ ಅನೇಕ ಸ್ವಾಮೀಜಿಗಳು ಪ್ರಕಟಿಸಿರುವ ಶ್ರೀಮಾತೆಯವರನ್ನು ಕುರಿತ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು, ಸರಳವಾಗಿ ಚಿಕ್ಕದಾಗಿ ಶ್ರೀಮಾತೆಯವರ ಬಗ್ಗೆ ಬರೆದಿರುವುದು ನಿಜಕ್ಕೂ ಮೆಚ್ಚಬೇಕಾದ ಅಂಶ. ಇನ್ನು ಶ್ರೀಮಾತೆಯವರ ಬಗ್ಗೆ ಲೇಖಕಿಯವರಿಗೆ ಇರುವ ಶ್ರದ್ಧೆ, ಭಕ್ತಿ, ವ್ಯಾಕುಲತೆಗಳ ಬಗ್ಗೆ ಅವರೇ ಮೊದಲ ಮಾತಿನಲ್ಲಿ, 'ಶ್ರೀಮಾತೆಯವರೇ ನನ್ನನ್ನು ಸಂಪೂರ್ಣ ಆವರಿಸಿ ಕೈ ಹಿಡಿದು ಬರೆಸಿದ್ದಾರೆ' ಎಂದು ಹೇಳಿದ್ದಾರೆ. ಗುರುದೇವ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿಯವರ ಬಗ್ಗೆ ಎಷ್ಟು ಓದಿದರೂ, ಅವರ ನೆನಪುಗಳು ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವಂತೆ, ಈ ಪುಸ್ತಕವೂ ಕೂಡ ಸುಲಭವಾಗಿ ಓದಿಸಿಕೊಂಡು ಹೋಗುವ ಗುಣ ಹೊಂದಿದೆ ಮತ್ತು ದಿವ್ಯದ್ವಯರ ವಿಷಯ ಮತ್ತೆ ಮತ್ತೆ ನೆನಪಿಸುವಂತೆ ಮಾಡುತ್ತದೆ. ಈ ಕೃತಿಯನ್ನು ಓದಿದಾಗ ಶ್ರೀಗುರುದೇವರ ಹಾಗೂ ಶ್ರೀಮಾತೆಯವರ ಜೀವನಗಂಗೆಯಲ್ಲಿ ಮಿಂದು ಕೃತಾರ್ಥರಾದೆವೆಂದು ಅನ್ನಿಸಬಹುದು. ಶ್ರೀಮಾತೆಯವರ ಜೀವನ, ಪ್ರೀತಿ, ಭಕ್ತರ ಮೇಲಿನ ಮಮತೆ, ಅವರ ಸರಳತೆಗಳಿಗೆ ಲೇಖಕಿ ಹೆಚ್ಚು ಮಹತ್ವ ನೀಡಿರುವುದು ಶ್ಲಾಘನೀಯ.

ಈ ಪುಸ್ತಕ ಶ್ರೀಮಾತೆ ಶಾರದಾದೇವಿಯವರ ಬಗ್ಗೆ ಹೆಚ್ಚು ತಿಳಿಯದಿದ್ದವರಿಗೆ ಓದಲು ಆಸಕ್ತಿ ಹುಟ್ಟಿಸಿ, ಅವರ ಬಗ್ಗೆ ಇನ್ನೂ ಹೆಚ್ಚು ತಿಳಿಯುವ, ಓದುವ ಹಂಬಲವನ್ನು ಖಂಡಿತ ಮೂಡಿಸುತ್ತದೆ. ಪುಸ್ತಕದ ರಕ್ಷಾಕವಚದಲ್ಲಿ ಮುದ್ರಿಸಿರುವ ಶ್ರೀಮಾತೆಯವರ ಚಿತ್ರ ಭಕ್ತಿ, ಪ್ರೇಮ ಹುಟ್ಟಿಸುವಂತಿದೆ. ಅವರ ಧ್ಯಾನಮುದ್ರೆ ಆಕರ್ಷಕವಾಗಿ ಬಂದಿದೆ. ಒಟ್ಟಿನಲ್ಲಿ ಇದೊಂದು ಸಂಗ್ರಹಯೋಗ್ಯವಾದ ಪುಸ್ತಕವೆನ್ನುವುದರಲ್ಲಿ ಎರಡು ಮಾತಿಲ್ಲ.

## ಕಮಲಾದೇವಿ ಚಟ್ಟೋಪಧ್ಯಾಯ – ಒಂದು ವಿಸ್ಮಯ



**ಲೇಖಕಿ :** ಶ್ರೀಮತಿ ಸೇವಂತಿ ಡಿ. ರೈ
**ಪ್ರಕಾಶಕರು :** ಲಲಿತ್ ಕಲ್ಯಾಣ್, ನಂ. ೪೭೬, ೨ನೇ ಮುಖ್ಯರಸ್ತೆ, ಐ ಬ್ಲಾಕ್, ರಾಮಕೃಷ್ಣನಗರ, ಮೈಸೂರು – ೫೭೦ ೦೨೨
**ಪುಟ :** ೧೬೪ ಬೆಲೆ: ₹ ೧೫೦/–

ಪದ್ಮವಿಭೂಷಣ, ಪದ್ಮಭೂಷಣ, ಮ್ಯಾಗ್ಸೆಸೆ ಮುಂತಾದ ಅನೇಕ ಪ್ರಶಸ್ತಿಗಳನ್ನು ಪಡೆದ, ಬಹುಮುಖ ಪ್ರತಿಭೆಯಿಂದ ಹೆಸರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ನಮ್ಮ ದೇಶದ ಅನರ್ಘ್ಯ ಸ್ತ್ರೀರತ್ನ. ಇವರ ಜೀವನಗಾಥೆಯೇ ಒಂದು ವಿಸ್ಮಯ. ಸ್ವಾತಂತ್ರ್ಯ ಸಂಗ್ರಾಮ, ಗಾಂಧೀಜಿ ಮುಂತಾದವರ ಒಡನಾಟ, ಬಡಜನ, ಮಹಿಳೆಯರ ಪರವಾದ ಹೋರಾಟ, ಕಾರ್ಮಿಕ ಸಂಘಟನೆ, ಧೈರ್ಯ, ಪ್ರಾಮಾಣಿಕತೆ, ಲಲಿತಕಲೆಗಳ ಆರಾಧನೆ ಇವುಗಳನ್ನು ಲೇಖಕಿ ವಿಸ್ತಾರವಾಗಿ ಹೃದಯ ಮುಟ್ಟುವಂತೆ ವಿವರಿಸಿದ್ದಾರೆ.

ದಕ್ಷಿಣ ಕನ್ನಡದಲ್ಲಿ ಜನಿಸಿದ ಕಮಲಾದೇವಿಯವರ ವಿಷಯದ ಜೊತೆಗೆ ಅಲ್ಲಿನ ಸಾಮಾಜಿಕ ಜೀವನ, ಸಾರಸ್ವತ–ಗೌಡ ಸಾರಸ್ವತರ ಹಿನ್ನೆಲೆ, ಜೀವನ ರೀತಿನೀತಿಗಳು, ತುಳುನಾಡ ಭೌಗೋಳಿಕ ವಿವರಣೆ, ಚಾರಿತ್ರಿಕ ವಿಚಾರಗಳು, ಹವಾಮಾನ, ನೀರು, ವ್ಯವಸಾಯ, ಜನರ ಸಂಪ್ರದಾಯಗಳು ಇವುಗಳ ಬಗ್ಗೆ ವಿವರವಾದ ಮಾಹಿತಿ ನೀಡಿದ್ದಾರೆ.

ಕಮಲಾದೇವಿಯವರಂಥ ಮಹಾನ್ ಚೇತನದ ಬಗ್ಗೆ ಬರೆಯಲು ಎಲ್ಲಾ ಐತಿಹ್ಯಗಳನ್ನು, ಇತರರು ಬರೆದ ಬರವಣಿಗೆಗಳನ್ನು ಕಲೆಹಾಕಿ, ಲೇಖಕಿ ತಮ್ಮ ಸ್ವಂತ ಕಥನಗುಣವನ್ನು ಈ ಬರವಣಿಗೆಯ ಮೂಲಕ ಚೆನ್ನಾಗಿ ತೋರಿಸಿದ್ದಾರೆ.

ಈ ಪುಸ್ತಕಕ್ಕೆ ಕಮಲಾದೇವಿ ಚಟ್ಟೋಪಧ್ಯಾಯ – ಒಂದು ವಿಸ್ಮಯ ಎಂದು ಇಟ್ಟಿರುವ ಹೆಸರು ಸಾರ್ಥಕವೆನಿಸುತ್ತದೆ.

ಒಟ್ಟಿನಲ್ಲಿ ಮಹಿಳೆ ಮನಸ್ಸಿದ್ದರೆ, ಯಾವ ತೊಂದರೆಯೇ ಇರಲಿ, ಆಕೆ ಏನನ್ನಾದರೂ ಮಾಡಬಲ್ಲಳು ಎಂಬುದಕ್ಕೆ ಕಮಲಾದೇವಿ ಒಂದು ಉದಾಹರಣೆ. ಮಹಾತ್ಮಾ ಗಾಂಧೀಜಿಯವರ ಒಡನಾಟ, ದಂಡೀಯಾತ್ರೆ, ಸ್ವಾತಂತ್ರ್ಯ ಚಳುವಳಿ, ಸೆರೆವಾಸ, ಇವನ್ನೆಲ್ಲಾ ಓದುತ್ತಾ ಹೋದಂತೆ, ಓದುಗರಲ್ಲಿ ದೇಶಪ್ರೇಮದ ಕಿಚ್ಚು ಹೆಚ್ಚುವಂತಿದೆ. ಮಹಿಳೆ ಅಬಲೆಯಲ್ಲ, ಸಬಲಳು ಎಂಬ ಮಾತನ್ನು ನಿಜ ಮಾಡಬೇಕೆನ್ನಿಸುವಂತಿದೆ. ಒಟ್ಟಾರೆ ಒಂದು ಸೊಗಸಾದ, ಅತ್ಯುತ್ತಮವಾದ, ಮುಖ್ಯವಾಗಿ ಎಲ್ಲ ಮಹಿಳೆಯರೂ ಓದಲೇಬೇಕಾದ ಪುಸ್ತಕ. ಸುಮಾರು ೧೫೦ ಪುಟಗಳಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರ ಸಂಪೂರ್ಣ ವ್ಯಕ್ತಿ ಚಿತ್ರಣವನ್ನು ಸುಂದರವಾಗಿ ನಿರೂಪಿಸಿದ್ದಾರೆ. ಭಾವಚಿತ್ರಗಳು ಸುಂದರವಾಗಿವೆ. ಅವುಗಳು ಕಮಲಾದೇವಿಯವರನ್ನು ನೆನೆಪಿಸಿಕೊಳ್ಳಲು ಅನುಕೂಲವಾಗಿದೆ. ಎಲ್ಲ ದೃಷ್ಟಿಯಿಂದಲೂ ಈ ಪುಸ್ತಕವನ್ನು ಬರೆದಿರುವ ಶ್ರೀಮತಿ ಸೇವಂತಿ ಡಿ. ರೈಯವರು ಅಭಿನಂದನಾರ್ಹರು.

*–ಉಷಾ*



# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು

ಡಾ. ಕೆ. ಅನಂತರಾಮು

## ಶ್ರೀಕೃಷ್ಣ ತುಲಾಭಾರ

ನಾನು ಪ್ರೀತಿಸುತ್ತಿರುವ ಪುರುಷನು ಸಾಮಾನ್ಯನಲ್ಲ, ಅವನು ಪಂಚಭೂತಗಳಿಂದಾಗಿರುವ ಸಾಮಾನ್ಯ ಶರೀರನಲ್ಲ. ಅವನು ಸಾಕ್ಷಾತ್ ಭಗವಂತನೇ ಆಗಿದ್ದಾನೆ ಎಂಬ ಭಾವನೆ ಬಂದಾಗ ಮಾತ್ರವೇ ನಾವು ಅವನನ್ನು ಪರಿಪೂರ್ಣವಾಗಿ ಪ್ರೀತಿಸುವುದು ಸಾಧ್ಯವಾಗುತ್ತದೆ. "ನನ್ನ ಗಂಡನೇ ನನಗೆ ದೇವರು" ಎಂದು ಭಾವಿಸಿದಾಗ, ಹೆಂಡತಿಯು ಅವನನ್ನು ಪರಿಪೂರ್ಣವಾಗಿ ಪ್ರೀತಿಸಲು ಸಾಧ್ಯವಾಗುತ್ತದೆ. ಹಾಗೆಯೇ "ನನ್ನ ಹೆಂಡತಿಯೇ ನನಗೆ ದೇವರು" ಎಂದು ಭಾವಿಸಿದಾಗ, ಗಂಡನು ಅವಳನ್ನು ಪರಿಪೂರ್ಣವಾಗಿ ಪ್ರೀತಿಸುವುದು ಸಾಧ್ಯವಾಗುತ್ತದೆ. ನಾವು ಯಾರನ್ನು ಪ್ರೀತಿಸುತ್ತೇವೆಯೋ ಅವರನ್ನು ಗೌರವಿಸುವುದು, ಪೂಜಿಸುವುದಲ್ಲದೆ ಬೇರೆ ಯೋಚನೆಯೇ ಅಲ್ಲಿರುವುದಿಲ್ಲ. ಪ್ರೇಮವೆಂಬುದು ಭಗವಂತನ ಸ್ವರೂಪವೇ ಆಗಿದೆ. ಆ ಪ್ರೇಮವೆಂಬ ಶಕ್ತಿಯೇ ಸೂರ್ಯಚಂದ್ರತಾರಾವಳಿಗಳನ್ನೆಲ್ಲ ಚಲಿಸುವಂತೆ ಮಾಡುತ್ತದೆ. ಆ ಪ್ರೇಮಶಕ್ತಿಯೇ ಸ್ತ್ರೀಪುರುಷರು, ಪಶುಪಕ್ಷಿಗಳು ಮತ್ತು ಸೃಷ್ಟಿಯ ಪ್ರತಿಯೊಂದರ ಅಂತರಾಳದಲ್ಲಿಯೂ ಇದ್ದುಕೊಂಡಿರುವ ತತ್ತ್ವವಾಗಿದೆ. ಸುತ್ತಲೂ ಹಬ್ಬಿಹರಡಿಕೊಂಡಿರುವ ಪ್ರಪಂಚದ ಹಿಂದೆ ಇರುವುದು ಅನಂತಪ್ರೇಮವೆಂಬ ಏಕಮಾತ್ರ ಕ್ರಿಯೋತ್ತೇಜಕ ಶಕ್ತಿಯೇ ಆಗಿದೆಯೆಂದು ವಿವೇಕಾನಂದರು ಹೇಳುತ್ತ ಪತಿಯೇ ದೇವರೆಂದು ಪ್ರೀತಿಸಿದ ರುಕ್ಮಿಣಿಯ ವೃತ್ತಾಂತವನ್ನು ಉಲ್ಲೇಖಿಸಿದ್ದಾರೆ. ಆ ವೃತ್ತಾಂತದ ವಿವರಗಳನ್ನು ಸ್ವಲ್ಪ ಸ್ಫುಟಗೊಳಿಸಿಕೊಂಡರೆ ವಿವೇಕಾನಂದರ ಚಿಂತನೆ ನಮಗೆ ಮನಮುಟ್ಟುತ್ತದೆ.

ಶ್ರೀಕೃಷ್ಣನ ರಾಣಿಯರಲ್ಲಿ ರುಕ್ಮಿಣಿ ಮತ್ತು ಸತ್ಯಭಾಮೆಯರು ಹೆಚ್ಚು ಪ್ರಸಿದ್ಧರಾಗಿದ್ದರು. ಸತ್ಯಭಾಮೆಯು ತನ್ನ ರೂಪವಿಲಾಸದಿಂದ ಕೃಷ್ಣನನ್ನು ಒಲಿಸಿಕೊಳ್ಳಲು ಯತ್ನಿಸುತ್ತಿದ್ದರೆ, ರುಕ್ಮಿಣಿಯು ತನ್ನ ಭಕ್ತಿವಿಲಾಸದಿಂದ ಅವನನ್ನು ಒಲಿಸಿಕೊಂಡಿದ್ದಳು. ರುಕ್ಮಿಣಿಯನ್ನು ಕಂಡರೆ ಸತ್ಯಭಾಮೆಗೆ ಅಷ್ಟಕ್ಕಷ್ಟೆ! ಒಮ್ಮೆ ನಾರದಮುನಿಗಳು ಶ್ರೀಕೃಷ್ಣನ ಅರಮನೆಯನ್ನು ಹೊಕ್ಕು, ತಾವು ಇಂದ್ರಲೋಕದಿಂದ ತಂದಿದ್ದ ಪಾರಿಜಾತ ಕುಸುಮದ ಪ್ರಸಾದವನ್ನು ಶ್ರೀಕೃಷ್ಣನ ಕೈಗಿತ್ತರು. ಅದನ್ನು ಕೃಷ್ಣನು ರುಕ್ಮಿಣಿಯ ಮುಡಿಗೇರಿಸಿಬಿಟ್ಟನು. ಅದನ್ನು ಸತ್ಯಭಾಮೆ ಸಹಿಸಿಕೊಳ್ಳಲಿಲ್ಲ. ಕೊನೆಗೆ ಆ ಪಾರಿಜಾತವೃಕ್ಷವನ್ನೇ ಇಂದ್ರಲೋಕದಿಂದ ತಂದು, ಸತ್ಯಭಾಮೆಯ ಮನೆಯಂಗಳದಲ್ಲಿ ನೆಟ್ಟುನಿಲ್ಲಿಸಬೇಕಾಯಿತು. ಆದರೇನು, ಆ ಪಾರಿಜಾತ ವೃಕ್ಷದ ಪುಷ್ಪವೆಲ್ಲ ರುಕ್ಮಿಣಿಯ ಮನೆಯಂಗಳದಲ್ಲಿ ಉದುರುತ್ತಿತ್ತು!

ಒಮ್ಮೆ ಸತ್ಯಭಾಮೆಯು ನಾರದರನ್ನು ಕುರಿತು "ಮಹರ್ಷಿಗಳೇ, ಜನ್ಮಜನ್ಮಾಂತರಕ್ಕೂ ಶ್ರೀಕೃಷ್ಣನೇ ನನಗೆ ಗಂಡನಾಗಬೇಕೆಂಬ ಹಂಬಲವಿದೆ; ಅದು ಈಡೇರಲು ಏನಾದರೂ ದಾರಿಯಿದೆಯೆ?" ಎಂದು ಕೇಳಿದಳು. ಅದಕ್ಕೆ ನಾರದರು "ಓಹೋ, ಇದೆ ತಾಯೆ, ನೀನು ಪುಣ್ಯಕವೆಂಬ ವ್ರತವನ್ನಾಚರಿಸಿ, ಅದರ ಮುಕ್ತಾಯದಲ್ಲಿ ಶ್ರೀಕೃಷ್ಣನನ್ನು ಯಾರಾದರೂ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟುಬಿಡು. ಆಗ ನಿನ್ನ ಹಂಬಲಕ್ಕೆ ಬೆಂಬಲ ದೊರಕುತ್ತದೆ" ಎಂದರು. ಸರಿಯೆ, ವ್ರತ ನಡೆದೇ ಹೋಯಿತು. ಅ ಹೊತ್ತಿಗೆ ಸರಿಯಾಗಿ ಅಲ್ಲಿಗೆ ಬಂದ ನಾರದರಿಗೇ ಪತಿದೇವರನ್ನು ದಾನ ಮಾಡಿದ್ದೂ ಆಗಿಹೋಯಿತು. ಆಗ ಶ್ರೀಕೃಷ್ಣನು ನಾರದರನ್ನು ಕುರಿತು, "ಈಗ ನಾನು ಏನು ಮಾಡಬೇಕು ಸ್ವಾಮಿ" ಎಂದು ಕೇಳಿದನು. ಅದಕ್ಕೆ ನಾರದರು "ಏನು ಮಾಡಬೇಕು ಎನ್ನುತ್ತೀಯಲ್ಲಪ್ಪಾ, ಇನ್ನು ಅರಮನೆಯಲ್ಲಿ ಇರುವಂತಿಲ್ಲ, ಹಿಡಿದುಕೋ ಈ ತಂಬೂರಿ, ನಡೆ ಹಾಡುತ್ತಾ ನನ್ನ ಹಿಂದೆ, ನೀನಿನ್ನು ನನ್ನ ಅನುಚರನಲ್ಲವೆ?" ಎಂದರು.

ಆಗ ಸತ್ಯಭಾಮೆಗೆ ಸಿಡಿಲೆರಗಿದಂತಾಯಿತು, ದಿಕ್ಕು ತೋಚದಾಯಿತು. "ಇದೆಂತಹ ಕೆಲಸ ಮಾಡಿಬಿಟ್ಟೆ" ಎಂದು ತನ್ನ ತಪ್ಪಿನ ಅರಿವಾಯಿತು. "ಈಗ ನೀವೇ ಏನಾದರೂ ಮಾರ್ಗ ತೋರಿಸಿ ನಾರದರೇ, ಸ್ವಾಮಿಯನ್ನು ಕಳೆದುಕೊಳ್ಳಲುಂಟೇ" ಎಂದು ಅಂಗಲಾಚಿದಳು. ಆಗ ನಾರದರು "ನಾನೇನೋ ಕೃಷ್ಣನನ್ನು ನಿನಗೇ ಮರಳಿಸಿ ಬಿಡುತ್ತೇನೆ. ಆದರೆ ದಾನವಾಗಿ ಕೊಟ್ಟುದನ್ನು ಮರಳಿ ಪಡೆದರೆ 'ದತ್ತಾಪಹಾರ' ಎಂಬ ದೋಷ ನಿನಗೆ ಅಂಟಿಕೊಳ್ಳುತ್ತದೆಯಲ್ಲ, ಅದಕ್ಕೇನು ಮಾಡುತ್ತೀಯೆ ತಾಯೆ" ಎಂದರು. "ಅದಕ್ಕೂ ನೀವೇ ಏನಾದರೂ ಪರಿಹಾರ ಸೂಚಿಸಬೇಕು ನಾರದರೆ" ಎಂದು ಸತ್ಯಭಾಮೆ ಅವರಿಗೇ ಶರಣಾದಳು. ಆಗ ನಾರದರು "ತಾಯೆ, ತುಲಾಭಾರದ ಮೂಲಕ ಕೃಷ್ಣನ ತೂಕಕ್ಕೇ ಸಮನಾಗುವ ನಿನ್ನ ಆಭರಣಗಳನ್ನು ತೂಗಿಸಿ ನನಗೆ ದಾನಮಾಡು, ನಾನು ನಿನಗೆ ಕೃಷ್ಣನನ್ನು ಹಿಂದಕ್ಕೆ ಕೊಡುತ್ತೇನೆ. ಆಗ ದೋಷವೆಲ್ಲ ಪರಿಹಾರವಾಗುತ್ತದೆ" ಎಂದು ಸಲಹೆಕೊಟ್ಟರು.

ಸತ್ಯಭಾಮೆಗೆ ಹೋದ ಜೀವ ಬಂದಂತಾಯಿತು. ಲಗುಬಗೆಯಿಂದ ಕೃಷ್ಣನನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಕೂರಿಸಿ,